**ಸಾಕ್ಷಿಯನ್ನು ಪುನಃ ದಿನಾಂಕ 06.02.2023 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು. ಮುಂದುವರೆದ ಪಾಟೀ ಸವಾಲು ಶ್ರೀ ಎಲ್ ಎಸ್ ಕೆ ವಕೀಲರಿಂದಃ**

ಆರೋಪಿತರು ನನಗೆ ಯಾವ ದಿನಾಂಕ, ತಿಂಗಳು ಮತ್ತು ಸಮಯದಂದು ತೊಂದರೆ ಕೊಟ್ಟಿರುತ್ತಾರೆಂದು ನಾನು ನಿಖರವಾಗಿ ನನ್ನ ದೂರಿನಲ್ಲಾಗಲೀ ಅಥವಾ ನಾನು ನ್ಯಾಯಾಲಯದ ಮುಂದೆ ನೀಡಿರುವ ನನ್ನ ಸಾಕ್ಷದಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಆ ರೀತಿ ಎಲ್ಲಾ ದಿನಾಂಕ, ತಿಂಗಳು ಮತ್ತು ಸಮಯಗಳನ್ನು ಹೇಳಿರುವುದಿಲ್ಲ ಆದರೆ ಕೆಲವೊಂದನ್ನು ಹೇಳಿರುತ್ತೇನೆ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು ಆ ರೀತಿ ಆ ರೀತಿ ಎಲ್ಲಾ ದಿನಾಂಕ, ತಿಂಗಳು ಮತ್ತು ಸಮಯಗಳನ್ನು ಹೇಳಲು ಸಾಧ್ಯವಿರದೇ ಇರುವ ಕಾರಣಕ್ಕಾಗಿ ಹಾಗೂ ಅದು ತುಂಬಾ ಪುಟಗಳನ್ನು ತೆಗೆದುಕೊಳ್ಳುತ್ತಿದ್ದ ಕಾರಣಕ್ಕಾಗಿ ಆ ರೀತಿ ನಿಖರವಾಗಿ ಹೇಳಿರುವುದಿಲ್ಲ.) ಆರೋಪಿತರು ನನಗೆ ಯಾವ ದಿನಾಂಕ, ತಿಂಗಳು ಮತ್ತು ಸಮಯದಂದು ಯಾವ ಫೋನ್ ನಿಂದ ಕರೆ ಮಾಡಿರುತ್ತಾರೆಂದು ನಾನು ನಿಖರವಾಗಿ ನನ್ನ ದೂರಿನಲ್ಲಾಗಲೀ ಅಥವಾ ನಾನು ನ್ಯಾಯಾಲಯದ ಮುಂದೆ ನೀಡಿರುವ ನನ್ನ ಸಾಕ್ಷದಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಆ ರೀತಿ ಎಲ್ಲಾ ದಿನಾಂಕ, ತಿಂಗಳು ಮತ್ತು ಸಮಯಗಳನ್ನು ಹಾಗೂ ಫೋನ್ ನಂಬರ್ ಗಳನ್ನು ಹೇಳಿರುವುದಿಲ್ಲ ಆದರೆ ಕೆಲವೊಂದನ್ನು ಹೇಳಿರುತ್ತೇನೆ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು ಆ ರೀತಿ ಆ ರೀತಿ ಎಲ್ಲಾ ದಿನಾಂಕ, ತಿಂಗಳು ಮತ್ತು ಸಮಯಗಳನ್ನು ಹಾಗೂ ಫೋನ್ ನಂಬರ್ ಗಳನ್ನು ಹೇಳಲು ಸಾಧ್ಯವಿರದೇ ಇರುವ ಕಾರಣಕ್ಕಾಗಿ ಹಾಗೂ ಅದು ತುಂಬಾ ಪುಟಗಳನ್ನು ತೆಗೆದುಕೊಳ್ಳುತ್ತಿದ್ದ ಕಾರಣಕ್ಕಾಗಿ ಆ ರೀತಿ ನಿಖರವಾಗಿ ಹೇಳಿರುವುದಿಲ್ಲ.) ಆರೋಪಿತರು ಯಾವತ್ತೂ ಕೂಡ ನನಗೆ ಯಾವುದೇ ಫೋನ್ ಕರೆಗಳನ್ನು ಮಾಡಿರುವುದಿಲ್ಲ ಹಾಗೂ ನನಗೆ ತೊಂದರೆ ನೀಡಿರುವುದಿಲ್ಲ, ಆ ಕಾರಣಕ್ಕಾಗಿ ನನಗೆ ಆ ರೀತಿ ನಿಖರವಾಗಿ ದಿನಾಂಕ, ತಿಂಗಳು ಮತ್ತು ಸಮಯಗಳನ್ನು ಹಾಗೂ ಫೋನ್ ನಂಬರ್ ಗಳನ್ನು ಹೇಳಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮನೆಯ ಮುಂದೆ ಬಂದು ನಿಂತಿದ್ದ ದಿನಾಂಕ, ತಿಂಗಳು, ವರ್ಷ ಮತ್ತು ಸಮಯವಾಗಲೀ ಅಥವಾ ಆರೋಪಿತರು ನನ್ನ ಮನೆಯ ಮುಂದೆ ಬಂದು ಗಲಾಟೆ ಮಾಡಿರುವ ದಿನಾಂಕ, ತಿಂಗಳು, ವರ್ಷ ಮತ್ತು ಸಮಯವಾಗಲೀ ನಾನು

ನಿಖರವಾಗಿ ಆ ಘಟನೆಗೆ ಸಂಬಂದಪಟ್ಟ ಹಾಗೆ ನನ್ನ ಪಿರ್ಯಾದಿಯಲ್ಲಾಗಲೀ ಅಥವಾ ನ್ಯಾಯಾಲಯದ ಮುಂದೆ ನೀಡಿರುವ ನನ್ನ ಸಾಕ್ಷ್ಯದಲ್ಲಾಗಲೀ ನಾನು ಹೇಳಿರುವುದಿಲ್ಲ ಎಂದರೆ ಘಟನೆ ನಡೆದಿರುವುದು ಸತ್ಯವಿರುತ್ತದೆ, ಆದರೆ ಆ ರೀತಿ ಆ ಘಟನೆಗೆ ಸಂಬಂದಪಟ್ಟ ಹಾಗೆ ಆ ಘಟನೆ ನಡೆದ ದಿನಾಂಕ, ತಿಂಗಳು, ವರ್ಷ ಮತ್ತು ಸಮಯವನ್ನು ಹೇಳಿರುವುದಿಲ್ಲ. ಆರೋಪಿತರು ಯಾವತ್ತೂ ಕೂಡ ನನ್ನ ಮನೆಯ ಮುಂದೆ ಬಂದಿರುವುದಿಲ್ಲ, ನನಗೆ ಯಾವುದೇ ತೊಂದರೆ ನೀಡಿರುವುದಿಲ್ಲ ಆದಾಗ್ಯೂ ಕೂಡ ನಾನು ಆರೋಪಿತರಿಗೆ ಕಿರುಕುಳ ನೀಡುವ ದುರುದ್ದೇಶದಿಂದ ಸುಳ್ಳು ದೂರನ್ನು ನೀಡಿ ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿರುತೇನೆಂದರೆ ಸರಿಯಲ್ಲ. ಸಾಮಾನ್ಯವಾಗಿ ಇಬ್ಬರು ವ್ಯಕ್ತಿಗಳ ಮದ್ಯೆ ಒಳ್ಳೆಯ ಸಂಬಂದ ಇದ್ದಾಗ ಮಾತ್ರ ಆ ಇಬ್ಬರು ವ್ಯಕ್ತಿಗಳು ಗಂಟೆ ಗಟ್ಟಲೇ ಫೋನ್ ನಲ್ಲಿ ಮಾತನಾಡುತ್ತಾರೆ ಇಲ್ಲವಾದರೆ ಫೋನನ್ನು ಬೇಗನೇ ಕಟ್ ಮಾಡುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಮಯದ ಅಬಾವದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಗಿರುತ್ತದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ ಮು ಮ ದಂ ನ್ಯಾ